# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎಂ.ಎ ಗೋಪಾಲಸ್ವಾಮಿ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 164
ಉತ್ತರಿಸಬೇಕಾದ ದಿನಾಂಕ : 11.02.2019

| | ಪ್ರಶ್ನೆ | ಉತ್ತರ |
|---|---|---|
| ಅ. | ಸಹಕಾರ ಇಲಾಖೆಯಿಂದ ಸಾರ್ವಜನಿಕರು ಮತ್ತು ರೈತರಿಗೆ ಅನುಕೂಲವಾಗಲು ರೂಪಿಸಿರುವ ಯೋಜನೆಗಳೇನು; ಈ ಯೋಜನೆಗಳ ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು) | ಸಹಕಾರ ಇಲಾಖೆಯಿಂದ ಸಾರ್ವಜನಿಕರು ಮತ್ತು ರೈತರಿಗೆ ಅನುಕೂಲವಾಗಲು ರೂಪಿಸಿರುವ ಯೋಜನೆಗಳು ಮತ್ತು ಮಾನದಂಡಗಳನ್ನು ಈ ಕೆಳಗೆ ನೀಡಲಾಗಿದೆ.<br>**<u>ರೂ.1 ಲಕ್ಷಗಳ ಸಾಲ ಮನ್ನಾ ಯೋಜನೆ</u>**<br>1. ಸಹಕಾರ ಸಂಘಗಳಲ್ಲಿ ಅಂದರೆ ಪ್ಯಾಕ್ಸ್, ಡಿಸಿಸಿ ಬ್ಯಾಂಕಿನ ಶಾಖೆಗಳು ಮತ್ತು ಪಿಕಾರ್ಡ್ ಬ್ಯಾಂಕುಗಳಲ್ಲಿ ರೈತರು ಬೆಳೆ ಸಾಲ ಪಡೆದು ದಿ.10-7-2018 ಕ್ಕೆ ಹೊರಬಾಕಿ ಹೊಂದಿರಬೇಕು.<br>2. ಕುಟಂಬಕ್ಕೆ ಗರಿಷ್ಠ ರೂ.1 ಲಕ್ಷಗಳ ವರೆಗೆ ಸಾಲ ಮನ್ನಾ ದೊರೆಯುತ್ತದೆ.<br>3. ಸಾಲ ಮನ್ನಾ ಸೌಲಭ್ಯವು ರೈತರು ಮರುಪಾವತಿ ಮಾಡಬೇಕಾದ ಗಡುವಿನ ದಿನಾಂಕಕ್ಕೆ ಜಾರಿಗೆ ಬರುತ್ತದೆ.<br>4. ಕುಟುಂಬದಲ್ಲಿ ಯಾವುದೇ ಸದಸ್ಯನು ರೂ.20000/ ಕ್ಕಿಂತ ಹೆಚ್ಚಿನ ವೇತನ/ಪಿಂಚಣಿ ಪಡೆಯುತ್ತಿದ್ದಲ್ಲಿ ಅಥವಾ ಕಳೆದ ಮೂರು ವರ್ಷಗಳಲ್ಲಿ ಆದಾಯ ತೆರಿಗೆ ಪಾವತಿಸಿದಲ್ಲಿ ಅಂತಹ ರೈತರಿಗೆ ಈ ಸೌಲಭ್ಯ ದೊರೆಯುವುದಿಲ್ಲ.<br>5. ದಿ.10-7-2018 ಕ್ಕೆ ಸಾಲವು ಚಾಲ್ತಿ ಇದ್ದು, ರೂ 1 ಲಕ್ಷಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಹೆಚ್ಚಿನ ಮೊತ್ತವನ್ನು ಗಡುವು ದಿನಾಂಕದೊಳಗೆ ಮರುಪಾವತಿಸಬೇಕು.<br>6. ದಿ.10-7-2018 ಕ್ಕೆ ಸಾಲವು ಸುಸ್ತಿ ಇದ್ದಲ್ಲಿ ಮಾರುಪಾವತಿ ದಿನಾಂಕದವರೆಗಿನ ಬಡ್ಡಿಯನ್ನು ಮತ್ತು ರೂ.1.00ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ದಿ.31-3-2019 ರೊಳಗೆ ಮರುಪಾವತಿಸಬೇಕು.<br>7. ದಿ.10-7-2018 ರಿಂದ ದಿ.30-9-2018 ರ ವರೆಗೆ ಗಡುವು ಬರುವ ಸಾಲಗಳಿಗೆ ಗಡುವು ದಿನಾಂಕದಿಂದ ಸಾಲ ಮರುಪಾವತಿ ದಿನಾಂಕದವರೆಗಿನ ಬಡ್ಡಿಯನ್ನು ಮತ್ತು ರೂ.1 ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ದಿ.31-3-2019 ರೊಳಗೆ ಮರುಪಾವತಿಸತಕ್ಕದ್ದು. |

| | | |
|---|---|---|
| | | 8. ಸಹಕಾರ ಸಂಘಗಳಲ್ಲಿ ಸಾಲ ಮನ್ನಾ ಸೌಲಭ್ಯ ಪಡೆದ ರೈತರಿಗೆ ವಾಣಿಜ್ಯ ಬ್ಯಾಂಕಿನಲ್ಲಿ ಸಾಲ ಮನ್ನಾ ಸೌಲಭ್ಯ ದೊರೆಯುವುದಿಲ್ಲ<br><br>**ಶೂನ್ಯ ಬಡ್ಡಿ ದರದಲ್ಲಿ ಅಲ್ಪಾವಧಿ ಬೆಳೆ ಸಾಲ ವಿತರಿಸುವ ಯೋಜನೆ**<br>1. ರೈತ ಸದಸ್ಯರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಪ್ರಾಥಮಿಕ ಸದಸ್ಯತ್ವವನ್ನು ಹೊಂದಿರಬೇಕು.<br>2. ಕೃಷಿ ಸಾಲ ಪಡೆಯಲು ರೈತರು ತಮ್ಮ ಹೆಸರಿನಲ್ಲಿ ಕೃಷಿ ಭೂಮಿ ಹೊಂದಿರಬೇಕು.<br>3. ಬೆಳೆ ವಿಮೆ ಅಧಿಸೂಚಿಸಿದ ಬೆಳೆಗಳಿಗೆ ಪ್ರೀಮಿಯಂನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.<br>4. ಸಾಲವನ್ನು ಗಡುವು ದಿನಾಂಕದಗೊಳಗೆ ಮರುಪಾವತಿಬೇಕು.<br><br>**ಶೇ.3 ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ವಿತರಿಸುವ ಯೋಜನೆ**<br>1. ರೈತ ಸದಸ್ಯರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಪ್ರಾಥಮಿಕ ಸದಸ್ಯತ್ವವನ್ನು ಹೊಂದಿರಬೇಕು.<br>2. ಕೃಷಿ ಸಾಲ ಪಡೆಯಲು ರೈತರು ತಮ್ಮ ಹೆಸರಿನಲ್ಲಿ ಕೃಷಿ ಭೂಮಿ ಹೊಂದಿರಬೇಕು.<br>3. ಯೋಜನಾ ವರದಿ ಮತ್ತು ಭೂ ದಾಖಲೆಗಳನ್ನು ಬ್ಯಾಂಕು ನೇಮಿಸದ ಕಾನೂನು ಸಲಹೆಗಾರರಿಂದ ಅಭಿಪ್ರಾಯ ಪಡೆಯಬೇಕು.<br>4. ಸಾಲದ ಕಂತುಗಳನ್ನು ಗಡುವು ದಿನಾಂಕದಗೊಳಗೆ ಮರುಪಾವತಿಬೇಕು<br>**ಮಹಿಳಾ ಸ್ವಸಹಾಯ ಗುಂಪುಗಳಿಗೆ ಶೂನ್ಯ ಮತ್ತು ಪುರುಷ ಸ್ವಸಹಾಯ ಗುಂಪುಗಳಿಗೆ ಶೇ.4 ರ ಬಡ್ಡಿ ದರದಲ್ಲಿ ಸಾಲ ವಿತರಿಸುವ ಯೋಜನೆ**<br>1. ಸ್ವಸಹಾಯ ಗುಂಪುಗಳನ್ನು ರಚಿಸಿಕನಿಷ್ಟ 6 ತಿಂಗಳಾಗಿದ್ದು, ಉಳಿತಾಯ ಪ್ರವೃತ್ತಿಯನ್ನು ಹೊಂದಿರಬೇಕು.<br>2. ಡಿಸಿಸಿ ಬ್ಯಾಂಕುಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು.<br>3. ಉಳಿತಾಯದ ಪ್ರಮಾಣವನ್ನು ಆಧರಿಸಿ ಸಾಲದ ಮೊತ್ತವನ್ನು ನಿರ್ಧರಿಸಲಾಗುವುದು.<br>4. ಸಾಲದ ಕಂತುಗಳನ್ನು ಗಡುವು ದಿನಾಂಕದಗೊಳಗೆ ಮರುಪಾವತಿಬೇಕು.<br>**ಬಡವರ ಬಂಧು ಯೋಜನೆ**<br>1. ಫಲಾನುಭವಿಗಳು ಬೀದಿ ವ್ಯಾಪಾರಿಗಳಾಗಿರಬೇಕು.<br>2. ಬೀದಿ ವ್ಯಾಪಾರಿಗಳು ವ್ಯಾಪಾರ ಮಾಡುತ್ತಿರುವ ಸ್ಥಳದ ಭಾವಚಿತ್ರ ಮತ್ತು ಆಧಾರ್ ಕಾರ್ಡ್‌ನ್ನು ಸಹಕಾರ ಬ್ಯಾಂಕುಗಳಿಗೆ ಸಲ್ಲಿಸಬೇಕು.<br>**ಕಾಯಕ ಯೋಜನೆ**<br>1. ಫಲಾನುಭವಿಗಳು ಸ್ವಸಹಾಯ ಗುಂಪುಗಳ ಸದಸ್ಯರಾಗಿರಬೇಕು.<br>2. ಸಹಕಾರ ಬ್ಯಾಂಕುಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು. |

| | | |
|---|---|---|
| | | 3. ಸ್ವಸಹಾಯ ಗುಂಪುಗಳು ಸ್ವಯಂ ಉದ್ಯೋಗ ಕೈಗೊಳ್ಳಲು ಯೋಜನೆ ಹೊಂದಿರಬೇಕು.<br>4. ಸಾಲದ ಕಂತುಗಳನ್ನು ಗಡುವು ದಿನಾಂಕದಗೊಳಗೆ ಮರುಪಾವತಿಬೇಕು.<br><br>**<u>ವಿವಿಧ ಸಹಕಾರ ಸಂಸ್ಥೆಗಳಲ್ಲಿ ಬಿಪಿಎಲ್/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ /ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಹಿಳೆ/ವಿಕಲಚೇತನರನ್ನು ಸದಸ್ಯರನ್ನಾಗಿ ನೋಂದಾಯಿಸುವ ಬಗ್ಗೆ</u>**<br>1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ಅಲೆಮಾರಿ ಜನಾಂಗದವರನ್ನು ಎಲ್ಲಾ ವಿವಿಧ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಷೇರು ಸಹಾಯಧನ ಸರ್ಕಾರದಿಂದ ನೀಡಲಾಗುತ್ತದೆ.<br>2. ಬಿಪಿಎಲ್ ಕುಟುಂಬದ ಒಬ್ಬ ಸದಸ್ಯರನ್ನು ಪ್ಯಾಕ್ಸ್‌ಗಳಲ್ಲಿ ಮಾತ್ರ ನೋಂದಾಯಿಸಲು ಸರ್ಕಾರದಿಂದ ಷೇರು ಸಹಾಯಧನ ನೀಡಲಾಗುತ್ತದೆ.<br>3. ಮಹಿಳೆಯವರನ್ನು/ವಿಕಲಚೇತನರನ್ನು ಎಲ್ಲಾ ವಿವಿಧ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಹಾಗೂ ಸದರಿಯವರು ಹೊಸ ಸಹಕಾರ ಸಂಘಗಳನ್ನು ಸ್ಥಾಪಿಸಲು ಸರ್ಕಾರದಿಂದ ಷೇರು ಸಹಾಯಧನವನ್ನು ನೀಡಲಾಗುತ್ತಿದೆ.<br>4. ಸಂಘದ ಉಪನಿಯಮದನ್ವಯ ಅಥವಾ ಗರಿಷ್ಠ 500/-ವರೆಗೆ ಮಂಜೂರು ಮಾಡಲಾಗುತ್ತದೆ.<br><br>**<u>ಯಶಸ್ವಿನಿ ಯೋಜನೆ</u>**<br>1. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ವತಿಯಿಂದ ಸಂಘಟಿಸಲ್ಪಟ್ಟಿರುವ ಎಲ್ಲಾ ಗ್ರಾಮೀಣ ಸ್ವ-ಸಹಾಯ ಗುಂಪುಗಳ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರು ನವೀಕರಿಸಲು/ ನೋಂದಾಯಿಸಲು ಅರ್ಹರಾಗಿರುತ್ತಾರೆ.<br>2. 2017-18ನೇ ಸಾಲಿಗೆ ಯಶಸ್ವಿನಿ ಸಹಕಾರ ರೈತರ ಆರೋಗ್ಯ ರಕ್ಷಣಾ ಯೋಜನೆಯ ವಾರ್ಷಿಕ ವಂತಿಗೆಯನ್ನು ಪ್ರತಿಯೊಬ್ಬರಿಗೆ ರೂ.300/-ಕ್ಕೆ ನಿಗದಿಗೊಳಿಸಲಾಗಿದೆ. ಈ ಯೋಜನೆಯ ಪ್ರಯೋಜನ ಪಡೆಯಲು ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಉದ್ದೇಶಿಸಿದ ಪ್ರತಿಯೊಬ್ಬ ಸದಸ್ಯರಿಗೆ ಕಡ್ಡಾಯವಾಗಿ ರೂ.300/- ವಂತಿಗೆ ಪಾವತಿ ಮಾಡಬೇಕು. ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದವರು ವಾರ್ಷಿಕ ವಂತಿಗೆ ರೂ.50/-ನ್ನು ಪಾವತಿಸಬೇಕು ಉಳಿದ ರೂ.250/-ನ್ನು ಸರ್ಕಾರದ ವತಿಯಿಂದ ಸಹಾಯಧನವಾಗಿ ಪಾವತಿಸಲಾಗುವುದು.<br>3. ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ವಯೋಮಿತಿಯ ನಿರ್ಬಂಧವು ಇರುವುದಿಲ್ಲ.<br>4. ಪ್ರತಿ ವರ್ಷ ಸದಸ್ಯರು ವಾರ್ಷಿಕ ವಂತಿಗೆಯನ್ನು ಪಾವತಿಸಿ ನವಿಕರಿಸಿಕೊಳ್ಳಬೇಕಾಗಿರುತ್ತದೆ. ನವಿಕರಿಸಕೊಳ್ಳದಿದ್ದಿಲ್ಲಿ ಹೊಸದಾಗಿ ಕಾರ್ಡ್ ಪಡೆಯತಕ್ಕದ್ದು. |
| ಆ) | ಸಹಕಾರ ಇಲಾಖೆಯಿಂದ ರೂಪಿಸಿರುವ ಈ ಯೋಜನೆಗಳಿಗಾಗಿ ಕಳೆದ 2 ವರ್ಷಗಳಲ್ಲಿ ಹಾಸನ ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು? ಖರ್ಚಾದ | ಮಾಹಿತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ |

| | | |
|---|---|---|
| | ಅನುದಾನವೆಷ್ಟು? ಯಾವ ಯೋಜನೆಗೆ ಎಷ್ಟು ಅನುದಾನ ಖರ್ಚಾಗಿದೆ(ತಾಲ್ಲೂಕುವಾರು ಮಾಹಿತಿ ನೀಡುವುದು) | |
| ಇ) | ಈ ಯೋಜನೆಗಳ ಅನುಕೂಲ ಪಡೆಯಲು ಕಳೆದ 2 ವರ್ಷಗಳಲ್ಲಿ ಎಷ್ಟು ಅರ್ಜಿಗಳು ಸ್ವೀಕೃತವಾಗಿವೆ. ಅನುಕೂಲ ಪಡೆದ ಮತ್ತು ಪಡೆಯದ ಫಲಾನುಭವಿಗಳೆಷ್ಟು? (ತಾಲ್ಲೂಕುವಾರು ಮತ್ತು ಯೋಜನಾವಾರು ವಿವರ ನೀಡುವುದು) | ಮಾಹಿತಿಯನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ |

**ಸಂಖ್ಯೆ: ಸಿಒ 24 ಸಿಎಲ್‌ಎಸ್ 2019**

**(ಎಸ್.ಟಿ. ಸೋಮಶೇಖರ್)**
ಸಹಕಾರ ಸಚಿವರು.